Phone: 08282-257424
E-Mail: kuhrmsection@gmail.com
Fax: 08282-256262
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

ಸಂಖ್ಯೆ:ಕುವಿ:ಮಾಸನಿ–9: :2016–17 ದಿನಾಂಕ:–22–08–2017

## ಕಛೇರಿ ಆದೇಶ

ವಿಷಯ: ಕಾನೂನು ಸಲಹೆಗಾರರನ್ನು ಗೌರವ ಸಂಭಾವನೆಯ ಮೇರೆಗೆ ನೇಮಕ ಮಾಡುವ ಕುರಿತು

ಉಲ್ಲೇಖ:
1. ಆದೇಶ ಸಂಖ್ಯೆ:ಕುವಿ:ಮಾಸನಿ–2:57:2015016:3698:ದಿನಾಂಕ: 07/08–10–2015
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 18–08–2017

***

**ಪ್ರಸ್ತಾವನೆ:**

ವಿಶ್ವವಿದ್ಯಾಲಯದ ವಿವಿಧ ಮೊಕದ್ದಮೆಗಳ ಕುರಿತು ವಕೀಲರು ಮತ್ತು ನ್ಯಾಯಾಲಯಗಳಿಗೆ ಸಲ್ಲಿಸಬೇಕಾದ ಕಂಡಿಕೆವಾರು ಉತ್ತರ ಇತ್ಯಾದಿ ವಿವರಗಳನ್ನು ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಹಾಗೂ ವಿಶ್ವವಿದ್ಯಾಲಯ ಕೋರುವ ಕಾನೂನು ಸಲಹೆ, ಕರಾರು ಪತ್ರಗಳ ಕರಡು ತಯಾರಿಕೆ, ಪರಿಶೀಲನೆ, ಉಚ್ಚ ನ್ಯಾಯಾಲಯ ಅಥವಾ ಆಯೋಗಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನು ರೀತ್ಯ ಅಭಿಪ್ರಾಯಗಳ ಬಗ್ಗೆ ಹಾಗೂ ವಿಶ್ವವಿದ್ಯಾಲಯದ ಪರಿನಿಯಮ ಇತ್ಯಾದಿಗಳನ್ನು ಸಿದ್ದಪಡಿಸಲು ಅನುಕೂಲವಾಗುವಂತೆ ಶ್ರೀ ಕೆ. ಬಸಪ್ಪಗೌಡ, ವಕೀಲರು, ಶಿವಮೊಗ್ಗ – ಇವರನ್ನು ದಿನಾಂಕ:01–08–2015 ರಿಂದ ಪೂರ್ವಾನ್ವಯವಾಗುವಂತೆ ಮುಂದಿನ ಆದೇಶದವರೆಗೆ ಮಾಸಿಕ ರೂ. 22,000–00ಗಳ ಗೌರವ ಸಂಭಾವನೆಯ ಆಧಾರದ ಮೇಲೆ ಕಾನೂನು ಸಲಹೆಗಾರರಾಗಿ ಉಲ್ಲೇಖ (1)ರಲ್ಲಿ ಮುಂದುವರೆಸಲಾಗಿತ್ತು. ಈಗಾಗಲೇ ಎರಡು ವರ್ಷಗಳು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಶ್ರೀಯುತರನ್ನು ದಿನಾಂಕ:01–08–2017 ರಿಂದ ಅನ್ವಯವಾಗುವಂತೆ ಮುಂದಿನ ಒಂದು ವರ್ಷದ ಅವಧಿಯವರೆಗೆ ಮಾಸಿಕ ರೂ. 22,000–00ಗಳ ಗೌರವ ಸಂಭಾವನೆಯ ಆಧಾರದ ಮೇಲೆ ಕಾನೂನು ಸಲಹೆಗಾರರಾಗಿ ಮುಂದುವರೆಸಲು ಈ ಕೆಳಕಂಡ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ:ಕುವಿ:ಮಾಸನಿ–9:2017–18: ದಿನಾಂಕ:22–08–2017**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಶ್ರೀ ಕೆ. ಬಸಪ್ಪಗೌಡ, ವಕೀಲರು, ಶಿವಮೊಗ್ಗ – ಇವರನ್ನು ದಿನಾಂಕ:01–08–2017 ರಿಂದ ಅನ್ವಯವಾಗುವಂತೆ ಮುಂದಿನ ಒಂದು ವರ್ಷದ ಅವಧಿಯವರೆಗೆ ಮಾಸಿಕ ರೂ. 22,000–00ಗಳ ಗೌರವ ಸಂಭಾವನೆಯ ಆಧಾರದ ಮೇಲೆ ಕಾನೂನು ಸಲಹೆಗಾರರಾಗಿ ಮುಂದುವರೆಸಲಾಗಿದೆ.

ಈ ವೆಚ್ಚವನ್ನು ವಿಶ್ವವಿದ್ಯಾಲಯದ ಆಯ–ವ್ಯಯದ "ಕಾನೂನು ವೆಚ್ಚ" ಶೀರ್ಷಿಕೆಯಡಿ ಭರಿಸಿ ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ.

ಸಹಾಯಕ ಕುಲಸಚಿವ
ಸಹಾಯಕ ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451
22/8/17.

ಗೆ,
ಶ್ರೀ ಬಸಪ್ಪಗೌಡ, ವಕೀಲರು, 'ಮಾತೃಕೃಪ' ಕುವೆಂಪು ರಸ್ತೆ, ಶಿವಮೊಗ್ಗ